# ಅಭ್ಯಾಸ ಪ್ರಶ್ನೆ ಪತ್ರಿಕೆ -೨

## ೧೦ನೆಯ ತರಗತಿ ಪ್ರಥಮಭಾಷೆ ಕನ್ನಡ ಗರಿಷ್ಠ ಅಂಕಗಳು : 100

**I . ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ . ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ . 6X1=6**

1.ಮೂಗಿನ ಸಹಾಯದಿಂದ ಉಚ್ಛರಿಸಲ್ಪಡುವ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ —

A . ಯೋಗವಾಹಗಳು B .ವ್ಯಂಜನಗಳು C . ಅನುನಾಸಿಕಗಳು D . ಸ್ವರಗಳು

2. ತುತ್ತ ತುದಿ ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ .

A. ದ್ವಿರುಕ್ತಿ. B. ಜೋಡುನುಡಿ C. ಅನುಕರಣಾವ್ಯಯ D. ನುಡಿಗಟ್ಟು

3.ಜಗಜ್ಜ್ಯೋತಿ ಪದವು ಈ ಸಂದಿಗೆ ಉದಾಹರಣೆಯಾಗಿದೆ

A. ಜಶ್ತ್ವ ಸಂಧಿ B. ವೃದ್ಧಿ ಸಂಧಿ. C. ಶ್ಚುತ್ವ ಸಂಧಿ. D . ಯಣ್ ಸಂಧಿ

4.ಅಬ್ಜೋದರ ಪದದಲ್ಲಿರುವ ಸಮಾಸವಿದು —

A.ಕರ್ಮಧಾರಯ B. ಅಂಶಿ C. ದ್ವಿಗು. D. ಬಹುವ್ರಿಹಿ

5. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು .

A. ಅರ್ಧವಿರಾಮ B.ಅಲ್ಪವಿರಾಮ C .ಪೂರ್ಣವಿರಾಮ D . ಆವರಣ

6. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ — —

A. ಸಾಮಾನ್ಯ ವಾಕ್ಯ B. ಮಿಶ್ರ ವಾಕ್ಯ C. ಸಂಯೋಜಿತ ವಾಕ್ಯ D. ನಿಷೇಧಾರ್ಥಕ ವಾಕ್ಯ

**II . ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ . 4X1=4**

7.ಬೀಯ :ವ್ಯಯ : : ಸಂದೆಯ : — —-

8. ಮೆಲ್ಲಗೆ : ಸಾಮಾನ್ಯಾವ್ಯಯ : : ಅಹುದು : — —-

9. ಹೋಗಲಿ : ವಿಧ್ಯರ್ಥಕ : : ಹೋದಾರು : — —

10.ಎರಡನೆಯ : ಸಂಖ್ಯೇಯವಾಚಕ : : ಪಡುವಣ : — —-

**III . ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ . 7X1=7**

11. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?

12. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು ?

13.ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?

14.ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

15.ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ ?

16. ಮುನಿಸುತರು ಹೆದರಲು ಕಾರಣವೇನು ?

17.ಬೀಸುಕಲ್ಲು ಅರ್ಥ ಬರುವ ಒಗಟನ್ನು ಬರೆಯಿರಿ .

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 10X2=20**

18. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು ?

19.ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

20. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?

21.ಧರ್ಮಾಧಿಕರಣರು ವಟವೃಕ್ಷಕ್ಕೆ ಏನೆಂದು ಹೇಳಿದರು

22.ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ?

23. ಪಾರ್ಥ-ಭೀಮರ ಬಗ್ಗೆ ದುರ್ಯೋಧನನ ಅಭಿಪ್ರಾಯವೇನು ?

24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಏನು ಹೇಳಿದ್ದಾರೆ ?

mamatabhagwat1@gmail.com ೮೭೬೨೧೦೭೧೩೪೪ ಕನ್ನಡತಿ ಮಮತಾ ಭಾಗ್ವತ್

**25. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?**
**26. ಭಗತ್ ಸಿಂಗ್ ಅಮರನಾದುದು ಹೇಗೆ ?**
**27. ಉಪ್ಪಿನ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತವಾಗಿದೆ ?**

**V ಕೆಳಗಿನ ಕವಿಗಳ /ಸಾಹಿತಿಗಳ ಜನ್ಮ ಸ್ಥಳ ,ಕಾಲ ,ಕೃತಿ ಮತ್ತು ಬಿರುದು /ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ . 2X3=6**
**28.ಎ.ಎನ್ . ಮೂರ್ತಿರಾವ್**
**29.ಲಕ್ಷ್ಮೀಶ**

**VI . ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ . 1X3=3**
**30. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

**VII ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣ ಬರೆದು ಸಮನ್ವಯಗೊಳಿಸಿ . 1X3=3**
**31. ವದನಾರವಿಂದ**

**VIII ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ . 1X3=3**
**32. ತಾಳಿದವನು ಬಾಳಿಯಾನು ಅಥವಾ ಕಟ್ಟುವುದು ಕಠಿಣ ; ಕೆಡಹುವುದು ಸುಲಭ**

**IX .ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ . 6X3=18**
**33.ಬಾಗಿಲು ತೆರೆಯಬೇಡಿ**
**34.ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ**
**35. ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ**
**36. ಮುಂಗಾರಿನ ಮಳೆಯಾಗೋಣ**
**37.ಬೇರೆ ಬಣ್ಣವನೆ ಕಾಣೆ**
**38.ಮೇಣಾಯ್ತು ಕೌರವಂಗವನಿತಳಂ**

**X . ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ . 1X4=4**
**39 . ನೀಲ ಮೇಘಂಂಡಲ ——ಹಕ್ಕಿ ಹಾರುತಿದೆ ನೋಡಿದಿರಾ ಅಥವಾ ಯುಗಯುಗಗಳ————————ಹಕ್ಕಿ ಹಾರುತಿದೆ ನೋಡಿದಿರಾ**

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ,ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ . 1X4=4**
**40 .ಮರುಳು ಮಾಧವ ಮಹಿಯ ರಾಜ್ಯದ**
**ಸಿರಿಗೆ ಸೋಲುವನಲ್ಲ ಕೌಂತೇ**
**ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ**
**ಹೊರೆದ ದಾತಾರಂಗೆ ಹಗೆವರ**
**ಶಿರವನರಿದೊಪ್ಪಿಸುವೆನೆಂಬೀ**
**ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ**

**XII ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ . 2X4=8**
**41. ಶಿಕ್ಷಣ ಕ್ಷೇತ್ರಕ್ಕೆ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಕೊಡುಗೆಯನ್ನು ತಿಳಿಸಿ ಅಥವಾ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು ' ಮಾದರಿ ಮೈಸೂರು ರಾಜ್ಯ 'ಹೇಗಾಯಿತು ?**
**42. ಹಲಗಲಿ ದಂಗೆಗೆ ಕಾರಣವೇನು ?ಸರಕಾರ ಅದನ್ನು ಹೇಗೆ ನಿಯಂತ್ರಿಸಿತು ?ಅಥವಾ ಹಲಗಲಿ ದಂಗೆಯ ಪರಿಣಾಮವೇನು ?**

mamatabhagwat1@gmail.com ೮೭೬೨೧೭೧೩೪೪ ಕನ್ನಡತಿ ಮಮತಾ ಭಾಗ್ವತ್

**XIII . ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1X4=4 (2+2)**

**ಮಹಾತ್ಮ ಬಸವಣ್ಣನವರು ಕಟ್ಟ ಬಯಸಿದ್ದು ಸರ್ವ ಶೋಷಣೆಗಳಿಂದಲೂ ಮುಕ್ತವಾದ ,ಸ್ವಾತಂತ್ರ್ಯ ,ಸಮಾನತೆ ,ಸೌಹಾರ್ದಗಳ ಅಡಿಗಲ್ಲಿನ ಮೇಲೆ ನಿಂತ ,ಸರ್ವೋದಯ ನಿಷ್ಠವಾದ ಒಂದು ಆದರ್ಶ ಸಮಾಜವನ್ನು . ಅವರು ಈ ನೆಲದ ಮೇಲೆ ನಡೆದಾಡಿ ಸುಮಾರು ಎಂಟುನೂರು ವರ್ಷಗಳು ಆಗಿ ಹೋದವು . ಅವರು ಕಲ್ಪಿಸಿಕೊಂಡು ಕಟ್ಟ ಬಯಸಿದ ಸಮಾಜ ಇಂದಿಗೂ ಸಂಪೂರ್ಣವಾಗಿ ಅಸ್ತಿತ್ವಕ್ಕೆ ಬಂದಿಲ್ಲವೆಂಬುದನ್ನು ಗಮನಿಸಿದಾಗ ಅಷ್ಟು ಹಿಂದೆಯೇ ಅವರು ಕಂಡ ಕನಸು ಮತ್ತು ಅದನ್ನು ನನಸು ಮಾಡಲು ನಡೆಸಿದ ಹೋರಾಟ ಎಷ್ಟು ದೊಡ್ಡವೆಂಬುದು ಅರಿವಾಗದಿರದು .ದೇವಲೋಕ ,ಮರ್ತ್ಯಲೋಕಗಳಿಗೆ ಹೊಸ ಅರ್ಥ ಕಲ್ಪಿಸಿದರು ಬಸವಣ್ಣ . ಅವರ ದೃಷ್ಟಿಯಲ್ಲಿ ದೇವಲೋಕ ಎಲ್ಲೋ ಇರವಂಥದ್ದಲ್ಲ . ಸತ್ತ ಮೇಲೆ ಗಳಿಸುವಂಥದ್ದಲ್ಲ. ಸತ್ಯವ ನುಡಿವುದೇ ದೇವಲೋಕ ,ಮಿಥ್ಯವ ನುಡಿವುದೇ ಮರ್ತ್ಯಲೋಕ . ಬಸವಣ್ಣನವರು ಪರವನ್ನು ಮರೆಯದೆ , ಇಹ ಜೀವನದ ಶುದ್ಧಿ ,ಆರ್ಜವಗಳಿಗೆ ಪರಮ ಪ್ರಾಶಸ್ತ್ಯ ಕೊಡುತ್ತಾರೆ . ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ . ಮರ್ತ್ಯದಲ್ಲಿ ಹೇಗೋ ಬದುಕಿ ಸ್ವರ್ಗಕ್ಕೆ ತೂರಿಕೊಳ್ಳುವುದು ಸಾಧ್ಯವಿಲ್ಲ. ಅಂಥ ಯಾವ ಸುಲಭೋಪಾಯವೂ ಇಲ್ಲ . ಸ್ವರ್ಗದ ಕೀಲಿ ಕೈ ಇರುವುದು ಮರ್ತ್ಯದಲ್ಲಿ . ಅದನ್ನು ಇಲ್ಲೇ ಕಷ್ಟಪಟ್ಟು ಸಂಪಾದಿಸಬೇಕು . ಹೀಗೆ ಇಹವನ್ನೇ ಪರವಾಗಿ ಅರಳಿಸುವ ಕ್ರಾಂತಿಕಾರಕ ಮನೋಧರ್ಮ ಮತ್ತು ಧರ್ಮ ಬಸವಣ್ಣನವರದು .**

**43 . ಪ್ರಶ್ನೆಗಳು :**

**ಅ)ಬಸವಣ್ಣನವರು ಎಂತಹ ಸಮಾಜವನ್ನು ಕಟ್ಟ ಬಯಸಿದ್ದರು ?**

**ಬ) ಬಸವಣ್ಣನವರು ಮರ್ತ್ಯಲೋಕಕ್ಕೆ ನೀಡಿದ ಹೊಸ ಅರ್ಥ ತಿಳಿಸಿ .**

**XIV . ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ . 1X5=5**

**44. ನಿಮ್ಮನ್ನು ಬೇಲೂರಿನ ಸರ್ಕಾರಿ ಪ್ರೌಢಶಾಲೆಯ ಮಹತಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಯೋಗದಿನಾಚರಣೆ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಜಾವಾಣಿ ಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ. .**

**ಅಥವಾ**

**ನಿಮ್ಮನ್ನು ಹೊಸನಗರದ ಶಾರದಾ ವಿದ್ಯಾ ಮಂದಿರ ಪ್ರೌಢ ಶಾಲೆಯಲ್ಲಿಓದುತ್ತಿರುವ ಸೌಪರ್ಣಿಕ ಎಂದು ಭಾವಿಸಿ ನಿಮ್ಮ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ಹೊನ್ನಾವರದ ಧಾರೇಶ್ವರದಲ್ಲಿರುವ ನಿಮ್ಮ ಸಹೋದರಿ ನೇತ್ರಾವತಿಗೆ ಪತ್ರ ಬರೆಯಿರಿ .**

**XV . ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ . 1X5=5**

**45. ದೇಶದ ಐಕ್ಯತೆಯಲ್ಲಿ ರಾಷ್ಟ್ರೀಯ ಹಬ್ಬಗಳ ಪ್ರಾಮುಖ್ಯತೆ ಅಥವಾ ಗಣಕಯಂತ್ರದ ಪ್ರಾಮುಖ್ಯತೆ**